ನಮ್ಮದೇ ಆಗಿದೆ. ಇದು ನಿಮ್ಮ ಗಮನದಲ್ಲಿರಲಿ.

ಶ್ರೀ ಎನ್.ಚಲುವರಾಯಸ್ವಾಮಿ:- ಅದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಸಿಬ್ಬಂದಿ ಕೊರತೆ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಕೊರತೆಯನ್ನು ತುಂಬುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಎ.ಕೃಷ್ಣಪ್ಪ:- ನಾನು ಈಗಾಗಲೇ ಉತ್ತರ ಕೊಟ್ಟಿದ್ದೇನೆ. 1312 ಹುದ್ದೆಗಳನ್ನು ಭರ್ತಿ ಮಾಡಿದಂಥ ಇತಿಹಾಸ ನಮ್ಮದೇ ಇರುವುದು. ಹಿಂದೆಂದೂ ಇದನ್ನು ಮಾಡಿರಲಿಲ್ಲ. ಈ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟಿದ್ದೇವೆ. ಮೊದಲನೇ ಸುತ್ತಿನಲ್ಲಿ 80 ಪರ್ಸೆಂಟ್ ಭರ್ತಿ ಮಾಡಿದ್ದಾರೆ. ಇನ್ನು 20 ಪರ್ಸೆಂಟ್ ಎರಡನೇ ಹಂತದಲ್ಲಿ ಆಗುತ್ತದೆ. ಎರಡನೇ ಹಂತದ ನೇಮಕಾತಿ ಪ್ರಕ್ರಿಯೆ ಆರಂಭಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಶ್ರೀ ಕೆ.ಎಂ.ಕೃಷ್ಣಮೂರ್ತಿ:- ಜಾನುವಾರುಗಳ ಸಂಖ್ಯೆ ಮೇಲೆ ಆಸ್ಪತ್ರೆ ಮಾಡಿದ್ದೇವೆ ಎಂದು ಹೇಳಿದಿರಿ. ನಮ್ಮ ರಾಜ್ಯದಲ್ಲಿ ಇರುವ ಜಾನುವಾರುಗಳ ಸಂಖ್ಯೆಯನ್ನು ತೆಗೆದುಕೊಂಡರೆ ಈಗಿರುವ ಆಸ್ಪತ್ರೆಗಳು ಯಾವುದಕ್ಕೂ ಸಾಕಾಗುವುದಿಲ್ಲ. ಹಿಂದೆ ಕೂಡ ವಿಧಾನಸಭೆಯಲ್ಲಿ ಭರವಸೆಯನ್ನು ಕೊಟ್ಟಿದ್ದರು. ಎಲ್ಲಾ ಗ್ರಾಮ ಪಂಚಾಯತಿಗಳಿಗೂ ಪಶು ಚಿಕಿತ್ಸಾ ಕೇಂದ್ರಗಳನ್ನು ಕೊಡುತ್ತೇವೆ ಎಂದು. ಇದನ್ನು ಯಾವಾಗ ಮಾಡುತ್ತೀರಿ?

ಶ್ರೀ ಎ.ಕೃಷ್ಣಪ್ಪ:- ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದರ ಸೆನ್ಸಸ್ ಪ್ರತಿದಿನ, ಪ್ರತಿ ತಿಂಗಳು ಮಾಡುವುದಿಲ್ಲ. ಇದು ಹತ್ತು ವರ್ಷಕ್ಕೊಮ್ಮೆ ಮಾಡುವಂಥಾದ್ದು. ಹಿಂದೆ ಅಗ್ರಿಕಲ್ಚರಲ್ ಕಮೀಷನ್ ಪ್ರಕಾರ ಚಿಕಿತ್ಸಾಲಯಗಳು ಜಾನುವಾರುಗಳ ಸಂಖ್ಯೆಗೆ ಸರಿಸಮಾನ ಆಗಿತ್ತು. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಮುಂದಿನ ರಿವ್ಯೂ ತೆಗೆದುಕೊಂಡು ಅದನ್ನು ಜಾಸ್ತಿ ಮಾಡುತ್ತೇವೆ. ಮಾನ್ಯ ಅಧ್ಯಕ್ಷರೇ, ನಿಮ್ಮಲ್ಲಿ ಜನಸಂಖ್ಯೆ ಈಗ ಇರಬಹುದು. ಹಿಂದೆ ಮಾಡಿದಂತಹ ಜನಗಣತಿಗೆ ಅನುಗುಣವಾಗಿ ಸರಿಯಾಗಿದೆ. ಕೇಂದ್ರ ಸರ್ಕಾರದವರು ಸಹ ಸ್ಟಡೀ ಮಾಡಿ ವರದಿ ಕೊಟ್ಟಿದ್ದಾರೆ. ಈಗ ಜನಸಂಖ್ಯೆ ಜಾಸ್ತಿಯಾಗಿದೆ. ಎಲ್ಲಿ ಜನಸಂಖ್ಯೆ ಜಾಸ್ತಿಯಾಗಿದೆ ಅದನ್ನು ಮುಂದಿನ ದಿನಗಳಲ್ಲಿ ತೆಗೆದುಕೊಳ್ಳಬೇಕಾಗುತ್ತದೆ.

ಬೆಂಗಳೂರು ನಗರದ ಮದರ್ ಡೈರಿ ಬೂತುಗಳಲ್ಲಿ ಯಂತ್ರಗಳು ಕೆಟ್ಟು ಹೋಗಿರುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 42(198)

ಸದಸ್ಯರ ಹೆಸರು : ಶ್ರೀ ರಾಮಲಿಂಗಾರೆಡ್ಡಿ(ಜಯನಗರ)

ಉತ್ತರಿಸುವವರು : ಶ್ರೀ ಎ.ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ಬೆಂಗಳೂರು ನಗರದಲ್ಲಿರುವ ಮದರ್‌ಡೈರಿ ಬೂತುಗಳ ಸಂಖ್ಯೆ ಎಷ್ಟು?

ಆ) ಈ ಬೂತುಗಳಿಂದ ಸರಾಸರಿ ಪ್ರತಿ ದಿನ ಮಾರಾಟವಾಗುವ ಹಾಲಿನ ಪ್ರಮಾಣವೆಷ್ಟು?

ಇ) ಈ ಬೂತುಗಳನ್ನು ಪಡೆದುಕೊಂಡವರು ಇತರರಿಗೆ ಪರಭಾರೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಬೂತುಗಳಲ್ಲಿ ನಾಣ್ಯವನ್ನು ಹಾಕಿ ಹಾಲನ್ನು ಒದಗಿಸುವ ಯಂತ್ರಗಳು ಕೆಟ್ಟುಹೋಗಿ ಹಾಲನ್ನು ಬಕೀಟುಗಳಲ್ಲಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಕೆಟ್ಟಿರುವ ಯಂತ್ರಗಳನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಊ) ಹಾಲನ್ನು ಬಕೀಟಿನಲ್ಲಿ ಇಟ್ಟುಕೊಂಡು ಕಲಬೆರಕೆ ಹಾಲನ್ನು ಮಾರುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ?

ಉತ್ತರ

ಅ) ಬೆಂಗಳೂರು ನಗರದಲ್ಲಿ ಮದರ್ ಡೇರಿಯ ಕಾರ್ಯವ್ಯಾಪ್ತಿಯಲ್ಲಿ ಒಟ್ಟು 147 ಸ್ವಯಂಚಾಲಿತ ಹಾಲಿನ ಕೇಂದ್ರಗಳಿದ್ದು ಇದರಲ್ಲಿ 116 ಕಾರ್ಯಾಚರಣೆಯಲ್ಲಿರುತ್ತವೆ. ಉಳಿದ 31 ಸ್ಥಗಿತಗೊಂಡಿರುತ್ತವೆ.

ಆ) ಪ್ರತಿ ದಿನ ಪ್ರತಿ ಸ್ವಯಂ ಚಾಲಿತ ಹಾಲಿನ ಕೇಂದ್ರದಲ್ಲಿ ಸರಾಸರಿ 245 ಲೀಟರ್ ಹಾಲು ಮಾರಾಟವಾಗುತ್ತಿದೆ.

ಇ) ಸ್ವಯಂಚಾಲಿತ ಹಾಲಿನ ಕೇಂದ್ರಗಳನ್ನು ಪಡೆದುಕೊಂಡಿರುವವರು ಅಥವಾ ಅವರ ಅಧಿಕೃತ ಪ್ರತಿನಿಧಿಗಳು ಖುದ್ದಾಗಿ ವಹಿವಾಟನ್ನು ಮಾಡುತ್ತಿದ್ದಾರೆ.

ಈ) ಈ ಬೂತುಗಳಲ್ಲಿ ನಾಣ್ಯ ಹಾಕಿ ಹಾಲನ್ನು ಪಡೆದುಕೊಳ್ಳುವ ಯಂತ್ರಗಳು, ಹಾಲಿ ಚಾಲ್ತಿಯಲ್ಲಿರುತ್ತವೆ. ಆದರೆ, ವಿದ್ಯುತ್ ನಿಲುಗಡೆ ಸಮಯದಲ್ಲಿ, ವಿದ್ಯುತ್ ಏರುಪೇರು ಆದ ಸಂದರ್ಭದಲ್ಲಿ ಹಾಗೂ ಈ ಯಂತ್ರಗಳು ಕೆಟ್ಟು ಹೋದ ಸಂದರ್ಭಗಳಲ್ಲಿ, ಗ್ರಾಹಕರಿಗೆ ಹಾಲನ್ನು ವಿತರಿಸಲು ತೊಂದರೆಯಾಗದಂತೆ ತಾತ್ಕಾಲಿಕ ವ್ಯವಸ್ಥೆಗಾಗಿ ಕೈಯಲ್ಲಿ ಅಳೆದು ಮಾರಾಟ ಮಾಡುವ ಪ್ರಸಂಗಗಳಿರುತ್ತವೆ. ಈ ಯಂತ್ರಗಳು ಕೆಟ್ಟು ಹೋಗಿರುವ ಬಗ್ಗೆ ಅಥವಾ ಕಾರ್ಯಾಚರಣೆ ಮಾಡದೇ ಇರುವ ಬಗ್ಗೆ ದೂರುಗಳು ಬಂದ ತಕ್ಷಣವೇ ತುರ್ತಾಗಿ ದುರಸ್ತಿ ಮಾಡಿಸುವ ವ್ಯವಸ್ಥೆ ಇದೆ.

ಉ) ಮದರ್ ಡೇರಿ ವತಿಯಿಂದ ಪ್ರತಿ 20 ಯಂತ್ರಗಳಿಗೆ ಒಬ್ಬ ತಾಂತ್ರಿಕರನ್ನು ಮೇಲುಸ್ತುವಾರಿ ಮಾಡಲು ಜವಾಬ್ದಾರಿ ವಹಿಸಲಾಗಿರುತ್ತದೆ. ಬೂತುಗಳನ್ನು ನಡೆಸುವವರು ಈ ರೀತಿ ಯಂತ್ರಗಳು ಕೆಟ್ಟು ಹೋಗಿರುವುದರ ಬಗ್ಗೆ ಡೇರಿಯ ಗಮನಕ್ಕೆ ತಂದಲ್ಲಿ ಕೂಡಲೇ ದುರಸ್ತಿ ಮಾಡುವ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ. ಈ ವ್ಯವಸ್ಥೆಯ ಜೊತೆಗೆ ಸ್ವಯಂ ಚಾಲಿತ ಹಾಲಿನ ಕೇಂದ್ರಗಳ ಯಂತ್ರಗಳನ್ನು ಉಸ್ತುವಾರಿ ಮಾಡಲು ಒಂದು ಸ್ಥಳೀಯ ಏಜೆನ್ಸಿಯ ಜೊತೆಗೆ ವಾರ್ಷಿಕ ಗುತ್ತಿಗೆಯ ಕರಾರು ಮಾಡಿ ಕೊಂಡಿದ್ದು ಯಂತ್ರಗಳ ದುರಸ್ಥಿಯನ್ನು ವ್ಯವಸ್ಥಿತವಾಗಿ ಮಾಡುವ ಕ್ರಮವನ್ನು ಕೈಗೊಳ್ಳಲಾಗಿರುತ್ತದೆ.

ಊ) ಮದರ್ ಡೇರಿಯ ಕಾರ್ಯವ್ಯಾಪ್ತಿಯಲ್ಲಿರುವ ಸ್ವಯಂಚಾಲಿತ ಹಾಲಿನ ಕೇಂದ್ರಗಳಲ್ಲಿ ಮಾರಾಟ ಮಾಡುತ್ತಿರುವ ಹಾಲಿನ ಗುಣಮಟ್ಟದ ಬಗ್ಗೆ ಡೇರಿಯ ಹಿರಿಯ ಅಧಿಕಾರಿಗಳಿಂದ ಆಗಿಂದಾಗ್ಗೆ ಅನಿರೀಕ್ಷಿತ ತಪಾಸಣೆ ಮಾಡುವ ವ್ಯವಸ್ಥೆ ಜಾರಿಯಲ್ಲಿದೆ. ತಪಾಸಣೆ ಮಾಡುವ ಸಂದರ್ಭದಲ್ಲಿ ಹಾಲು ಮಾರಾಟಗಾರರು ಕಲಬೆರಕೆ ಹಾಲನ್ನು ಮಾರಾಟ ಮಾಡುತ್ತಿರುವುದು ರುಜುವಾತಾದಲ್ಲಿ ಅಂತಹವರಿಗೆ ದಂಡ ವಿಧಿಸಿ ಎಚ್ಚರಿಕೆ ನೀಡುವ ವ್ಯವಸ್ಥೆಗಳು ಜಾರಿಯಲ್ಲಿರುತ್ತದೆ. ಇವು ಪುನರಾವರ್ತನೆಯಾದಲ್ಲಿ ಸದರಿ ಹಾಲು ಮಾರಾಟಗಾರರ ಮಾರಾಟಗಾರಿಕೆಯನ್ನು ರದ್ದುಪಡಿಸಲಾಗುವುದು.

ಶ್ರೀ ರಾಮಲಿಂಗಾರೆಡ್ಡಿ:-ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ಒಟ್ಟು 147 ಸ್ವಯಂ ಚಾಲಿತ ಹಾಲಿನ ಕೇಂದ್ರಗಳಿದ್ದು ಅದರಲ್ಲಿ 116 ಕಾರ್ಯಾಚರಣೆಯಲ್ಲಿರುತ್ತವೆ. ಇನ್ನುಳಿದ 31 ಸ್ಥಗಿತಗೊಂಡಿರುತ್ತವೆಂದು ತಿಳಿಸಿರುತ್ತೀರಿ. ಇವುಗಳನ್ನು ಯಾವಾಗ ರಿಪೇರಿ ಮಾಡಿಸುತ್ತೀರಿ?

ಶ್ರೀ ಎ.ಕೃಷ್ಣಪ್ಪ:-ಮಾನ್ಯ ಅಧ್ಯಕ್ಷರೇ, ಯಂತ್ರಗಳನ್ನು ಉಪಯೋಗ ಮಾಡುವಾಗ ಅವುಗಳು ಕೆಡುವುದು ಸಾಮಾನ್ಯ. ಈ ಯಂತ್ರಗಳನ್ನು ಸುಸ್ಥಿತಿಯಲ್ಲಿಡಲು ಒಂದು ಪ್ರೈವೇಟ್ ಏಜನ್ಸಿಯನ್ನು ನಾವು ನೇಮಕ ಮಾಡಿದ್ದೇವೆ. ಅವರು ಎಲ್ಲವನ್ನೂ ಅಪ್-ಟು-ಡೇಟ್ ಮಾಡುತ್ತಾರೆ. ಈಗ ಹಾಲಿ ಕೆಟ್ಟಿರುವ 31 ಸ್ವಯಂಚಾಲಿತ ಹಾಲಿನ

ಯಂತ್ರಗಳನ್ನು ಆದಷ್ಟು ಬೇಗ ರಿಪೇರಿ ಮಾಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಬೆಂಗಳೂರು ಮದರ್ ಡೈರಿಗೆ ಕೋಲಾರ ಜಿಲ್ಲೆಯಿಂದ ಹಾಲು ಬರುತ್ತದೆ. ಬೆಂಗಳೂರು ನಗರದ ಇಂದಿರಾನಗರದವರೆಗೂ ಅವರಿಗೆ ಹಾಲಿನ ಮಾರಾಟ ಮಾಡಲು ನಾವು ಅನುಮತಿಯನ್ನು ನೀಡಿದ್ದೇವೆ. ಮದರ್ ಡೈರಿ ಹಾಲು ಬಹಳ ಉತ್ಕೃಷ್ಟವಾಗಿರುತ್ತದೆ ಮತ್ತು ಈ ಮದರ್ ಡೈರಿ ಹಾಲಿನಲ್ಲಿ 8:5 ಪರ್ಸೆಂಟ್‌ನಷ್ಟು ಎಸ್.ಎನ್.ಎಫ್ ಇರುತ್ತದೆ. ಇದು ಒಳ್ಳೆಯ ಟೋನ್ಡ್ ಮಿಲ್ಕ್. ಆದರೆ ಈ ಮದರ್ ಡೈರಿಯಲ್ಲಿ ಕೆಲಸ ಮಾಡುವವರು ಈ ಯಂತ್ರಗಳನ್ನು ಕೆಡಿಸಿ ಹೊರಗಡೆ ಹಾಲು ಮಾರಾಟ ಮಾಡುತ್ತಿರುತ್ತಾರೆ. ಈ ಮದರ್ ಡೈರಿಯ ಕಾನ್‌ಸೆಪ್ಟ್ ಏನೆಂದರೆ ಗ್ರಾಹಕರು ಹಾಲಿನ ಕೇಂದ್ರಗಳಲ್ಲಿ ಆಗುತ್ತಿರುವ ಅವ್ಯವಹಾರವನ್ನು ತಪ್ಪಿಸಲು ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಂಡಿದ್ದಾರೆ?

ಶ್ರೀ ಎ.ಕೃಷ್ಣಪ್ಪ:-ಮಾನ್ಯ ಅಧ್ಯಕ್ಷರೇ, ಈ ಮದರ್ ಡೈರಿ ಹಾಲಿನ ಕೇಂದ್ರಗಳಲ್ಲಿ ಏನಾದರೂ ಅವ್ಯವಹಾರಗಳು ಆಗುತ್ತಿರುವುದು ನನ್ನ ಗಮನಕ್ಕೆ ಬಂದ ತಕ್ಷಣ ನಾನು ಕ್ರಮ ತೆಗೆದುಕೊಂಡಿದ್ದೇನೆ. ಅದೂ ಬಹಳ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮಾನ್ಯ ಸದಸ್ಯರು ಯಾವುದಾದರೂ ಸ್ಪೆಸಿಫಿಕ್ ಆದ ಪ್ರಕರಣಗಳು ಇದ್ದರೆ ಅದನ್ನು ನನ್ನ ಗಮನಕ್ಕೆ ತಂದರೆ ನಾನು ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು:- ಮಾನ್ಯ ಮಂತ್ರಿಗಳು ಪತ್ರ ಬರೆದಿದ್ದಾರೆ. ಈ ಪ್ರಶ್ನೆಗಳನ್ನು ಮುಂದಿನ ವಾರ ತೆಗೆದುಕೊಳ್ಳೋಣ.

ಹಿಂದುಳಿದ ವರ್ಗಗಳ ಖಾಯಂ ಆಯೋಗದ ವರದಿ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 45(590)

ಸದಸ್ಯರ ಹೆಸರು : ಶ್ರೀ ಕೆ.ಜಯಪ್ರಕಾಶ್ ಹೆಗಡೆ(ಬ್ರಹ್ಮಾವರ)

ಸಚಿವರ ಹೆಸರು ಮತ್ತು ಪದನಾಮ : ಶ್ರೀ ಕಾಗೋಡು ತಿಮ್ಮಪ್ಪ(ಸಮಾಜ ಕಲ್ಯಾಣ ಸಚಿವರು)

ಪ್ರಶ್ನೆ

1) ಅ) ಹಿಂದುಳಿದ ವರ್ಗಗಳ ಖಾಯಂ ಆಯೋಗವು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆಯೇ?